

ಬಿಸಿಲು
ಬೆಳದಿಂಗಳು
ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ
swamiji@taralabalu.org

# ಶತಮಾನ ದಾಟಿದ 'ಗುಬ್ಬಿಗಳ ಗೂಡು'

ಗುಬ್ಬಿಯ ಗೂಡನ್ನು ನೀವು ಚಿಕ್ಕಂದಿನಲ್ಲಿ ನೋಡಿರಬಹುದು. ನದಿಯ ತೀರಗಳಲ್ಲಿ, ಹಳ್ಳಕೊಳ್ಳಗಳ ದಂಡೆಯಲ್ಲಿ ದಟ್ಟವಾದ ಗಿಡಮರಗಳ ಕೊಂಬೆಗಳಿಂದ ನೇತುಬಿದ್ದಿರುವ ಗುಬ್ಬಿ ಗೂಡು ಈಗ ಅಷ್ಟಾಗಿ ನೋಡಲು ಸಿಗದ ಅಪರೂಪದ ದೃಶ್ಯ. ಎಲ್ಲಿಂದಲೋ ಒಂದೊಂದೇ ಹುಲ್ಲುಕಡ್ಡಿಯನ್ನು ತನ್ನ ಚಿಕ್ಕ ಕೊಕ್ಕಿನಲ್ಲಿ ಹಿಡಿದು ತಂದು ಒಂದಕ್ಕೊಂದಕ್ಕೆ ಹೆಣೆದು ಗೂಡನ್ನು ಸಿದ್ಧಪಡಿಸುವ ಗುಬ್ಬಿಯ ಕೌಶಲ ಆಧುನಿಕ ಆರ್ಕಿಟೆಕ್ಟ್‌ರವರನ್ನೂ ಮೀರಿಸಬಲ್ಲುದು. ಗೂಡಿನೊಳಗೆ ತಾನು ಮಾತ್ರ ಹೋಗಲು ಒಂದು ಪ್ರವೇಶದ್ವಾರವನ್ನು ನಿರ್ಮಿಸಿಕೊಂಡಿರುತ್ತದೆ. ಗೂಡಿನ ಮಧ್ಯೆ



ತನ್ನ ಮೊಟ್ಟೆಗಳನ್ನು ಸುರಕ್ಷಿತವಾಗಿ ಇಟ್ಟು ಕಾವುಕೊಡುತ್ತದೆ. ಮೊಟ್ಟೆಯೊಡೆದು ಮರಿಗಳು ಹೊರಬಂದಾಗ ಅವುಗಳಿಗೆ ಹೊರಗಿನಿಂದ ಆಹಾರವನ್ನು ತಂದು ತಿನ್ನಿಸಿ ತನ್ನ ವಂಶದ ಕುಡಿಯನ್ನು ಬೆಳೆಸುವ ಅದರ ತಾಯ್ತನದ ಹೃದಯ ನಿಜಕ್ಕೂ ಮೆಚ್ಚುವಂತಹುದು. ಗುಬ್ಬಿಯ ಹೆಸರಿನ ತಾಲ್ಲೂಕು ಕೇಂದ್ರ ತುಮಕೂರು ಜಿಲ್ಲೆಯಲ್ಲಿದೆ. ಅದಕ್ಕೆ ಆ ಹೆಸರು ಬರಲು ಕಾರಣ ಅಲ್ಲಿರುವ ಮಲ್ಲಿಕಾರ್ಜುನಸ್ವಾಮಿಯ ಗುಡಿಯಲ್ಲಿ ಗುಬ್ಬಿ ಮಲ್ಲಣ್ಣಾರ್ಯ ಸ್ವಾರಸ್ಯಕರವಾಗಿ ವ್ಯಾಖ್ಯಾನಿಸುತ್ತಿದ್ದ ಬಸವಪುರಾಣವನ್ನು ಕೇಳಲು ಬರುತ್ತಿದ್ದ ಎರಡು ಗುಬ್ಬಿಗಳು ಎಂಬ ಐತಿಹ್ಯವಿದೆ. ಅದೇನೇ ಇರಲಿ. ನಾವೀಗ ಬರೆಯಹೊರಟಿರುವುದು ಗುಬ್ಬಿಯ ಗೂಡಿನ ಇತಿಹಾಸವನ್ನು ಕುರಿತು ಅಲ್ಲ. ಗುಬ್ಬಿಯ ಗೂಡಿನಂತೆಯೇ ಪ್ರತಿಭಾವಂತ ಗ್ರಾಮೀಣ ಬಡಮಕ್ಕಳಿಗೆ ಕಳೆದ ಒಂದು ಶತಮಾನದಿಂದ ಆಶ್ರಯತಾಣವಾಗಿರುವ ಬೆಂಗಳೂರಿನ ಗುಬ್ಬಿ ತೋಟದಪ್ಪನವರ ಉಚಿತ ಪ್ರಸಾದ ನಿಲಯ ಮತ್ತು ಛತ್ರ ಕುರಿತು. ಸಂದರ್ಭ: ಟ್ರಸ್ಟಿನ ಅಧ್ಯಕ್ಷರಾದ ಕರ್ನಾಟಕದ ನಿವೃತ್ತ ಕಾರ್ಯದರ್ಶಿ ಎಚ್.ಕೆ ಶಿವಾನಂದರ ಆಹ್ವಾನದ ಮೇರೆಗೆ ಭಾಗವಹಿಸಿದ್ದ ಈ ನಿಲಯದ ಹಿರಿಯ ವಿದ್ಯಾರ್ಥಿಗಳ ಬೀಳ್ಕೊಡುಗೆ ಸಮಾರಂಭ. ಅಂದು ಅನ್ನದಾತ ತೋಟದಪ್ಪನವರನ್ನು ಕುರಿತು ವಿದ್ಯಾರ್ಥಿನಿ ಕು. ಪವಿತ್ರಾ ಆಡಿದ ಮಾತಿನಲ್ಲಿ ಕೃತಜ್ಞತೆಯ ಭಾವ ಮಿಡಿಯುತ್ತಿತ್ತು.

ಗುಬ್ಬಿಯ ಮಲ್ಲಣ್ಣ ಮತ್ತು ಮಲ್ಲಣಾರ್ಯರು ಕವಿಗಳಾಗಿ ಗುಬ್ಬಿಗೆ ಹೆಸರು ತಂದರೆ, ವರ್ತಕರಾಗಿ ಬೆಂಗಳೂರಿನಲ್ಲಿ ನೆಲೆಸಿದ್ದ ಗುಬ್ಬಿ ತೋಟದಪ್ಪನವರು ಮಹಾದಾನಿಗಳಾಗಿ ತಮ್ಮ ಊರಿಗೆ ಕೀರ್ತಿ ತಂದರು. ಮಕ್ಕಳಿಲ್ಲದ ಅವರ ಮನೆಯಲ್ಲಿ ಅನೇಕ ಬಡ ವಿದ್ಯಾರ್ಥಿಗಳು ಆಶ್ರಯ ಪಡೆದಿದ್ದರು; ಊಟ ವಸತಿಗಳನ್ನು ಪಡೆದು ವಿದ್ಯಾಭ್ಯಾಸ ಮಾಡುತ್ತಿದ್ದರು. ಮುಂದೆ ವಿದ್ಯಾರ್ಥಿ ನಿಲಯ ಸ್ಥಾಪಿಸಲು ತೋಟದಪ್ಪನವರಿಗೆ ಇದು ಸ್ಫೂರ್ತಿಯಾಯಿತು. 1897 ರಲ್ಲಿ ಮೈಸೂರು ರೈಲ್ವೆ ಇಲಾಖೆಯಿಂದ 10,000/- ರೂ. ಗಳಿಗೆ ಜಮೀನು ಖರೀದಿಸಿ ಅಲ್ಲಿ ವೀರಶೈವ ವಿದ್ಯಾರ್ಥಿ ನಿಲಯವನ್ನು ಕಟ್ಟಿಸಿದರು. ಶ್ರೀಮನ್ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಸಮ್ಮುಖದಲ್ಲಿ 11.2.1903 ರಂದು ವಿದ್ಯಾರ್ಥಿ ನಿಲಯ ಮತ್ತು ಛತ್ರಗಳ ಉದ್ಘಾಟನೆಯಾಯಿತು. ಆರಂಭದಲ್ಲಿ 40 ವಿದ್ಯಾರ್ಥಿಗಳಿದ್ದದ್ದು ಈಗ 400 ಕ್ಕೆ ಏರಿದೆ. ಅಲ್ಲದೆ ಹೆಣ್ಣುಮಕ್ಕಳಿಗೂ ವಿದ್ಯಾರ್ಥಿ ನಿಲಯ ಈಗ ನಿರ್ಮಾಣವಾಗಿದ್ದು ಅಲ್ಲಿ ರಾಜ್ಯದ ವಿವಿಧ ಭಾಗಗಳಿಂದ ಬಂದ 133 ವಿದ್ಯಾರ್ಥಿನಿಯರು ಆಶ್ರಯ ಪಡೆದಿದ್ದಾರೆ.

ಶತಾಯುಷಿ ಸಿದ್ಧಗಂಗಾ ಮಠಾಧೀಶರಾದ ಡಾ। ಶಿವಕುಮಾರ ಸ್ವಾಮಿಗಳವರು 1927-30 ಅವಧಿಯಲ್ಲಿ ಈ ವಿದ್ಯಾರ್ಥಿ ನಿಲಯದಲ್ಲಿದ್ದರೆಂಬುದು ಒಂದು ವಿಶೇಷ ಸಂಗತಿ. ಸಿದ್ಧಗಂಗೆಯಲ್ಲಿ ಅನ್ನದಾನ ಮತ್ತು ವಿದ್ಯಾದಾನ ನೀಡಲು ಅವರಿಗೆ ವಿದ್ಯಾರ್ಥಿ ದಿನಗಳಲ್ಲಿ ಆಶ್ರಯ ನೀಡಿದ್ದ ತೋಟದಪ್ಪನವರ ಈ ವಿದ್ಯಾರ್ಥಿನಿಲಯವೇ ಸ್ಫೂರ್ತಿ ಎಂದರೆ ತಪ್ಪಲ್ಲ. ಮಾಜಿ ಮುಖ್ಯಮಂತ್ರಿ ದಿವಂಗತ ಎಸ್ ನಿಜಲಿಂಗಪ್ಪನವರೂ ಸಹ 1921-24 ರ ಅವಧಿಯಲ್ಲಿ ಇದೇ ವಿದ್ಯಾರ್ಥಿ ನಿಲಯದಲ್ಲಿ ಆಶ್ರಯ ಪಡೆದು ವಿದ್ಯಾಭ್ಯಾಸ ಮಾಡಿದವರು. 1995 ರಲ್ಲಿ ನಡೆದ ತೋಟದಪ್ಪನವರ ಪುತ್ಥಳಿ ಅನಾವರಣ ಸಮಾರಂಭದಲ್ಲಿ ಅವರು ಹೇಳಿದ ಮಾತಿವು: "ಈ ಪುಣ್ಯಾತ್ಮ ಇಂತಹದೊಂದು ಉಚಿತ ಪ್ರಸಾದ ಹಾಗೂ ವಸತಿನಿಲಯವನ್ನು ಸ್ಥಾಪಿಸದೇ ಹೋಗಿದ್ದರೆ ನನ್ನಂತಹ ಆ ಕಾಲದ ಬಡ ವಿದ್ಯಾರ್ಥಿಗಳು ಶಿಕ್ಷಣ ಮುಂದುವರಿಸಲಾಗದೇ ಹೊಲ ಗದ್ದೆಗಳಲ್ಲಿ ಕೂಲಿನಾಲಿ ಮಾಡಬೇಕಾಗುತ್ತಿತ್ತು."

20 ನೇ ಶತಮಾನದ ಆರಂಭದ ದಶಕಗಳಲ್ಲಿ ಎಲ್ಲ ಜನಾಂಗದವರು ತಂತಮ್ಮ ಜನಾಂಗದ ವಿದ್ಯಾರ್ಥಿಗಳ ಕಲ್ಯಾಣಕ್ಕಾಗಿ ಇಂಥ ವಿದ್ಯಾರ್ಥಿ ನಿಲಯಗಳನ್ನು ಆರಂಭಿಸಿದರು. ಅಂದಿನ ಸರ್ಕಾರದವರೂ ಸಹ ನಿವೇಶನಗಳನ್ನು ಆ ಉದ್ದೇಶಕ್ಕಾಗಿ ನೀಡುತ್ತಿದ್ದರು. ಚಿಕ್ಕಮಗಳೂರಿನಲ್ಲಿನ ನಮ್ಮ ಮಠದ ವಿದ್ಯಾರ್ಥಿ ನಿಲಯವೂ ಸಹ ಮೈಸೂರು ಮಹಾರಾಜರಿಂದ ಶಂಕುಸ್ಥಾಪನೆಗೊಂಡು ಆರಂಭವಾಗಿದ್ದು 1913 ರಲ್ಲಿ. ಮೈಸೂರಿನಲ್ಲಿರುವ ನಮ್ಮ ಮಠದ ವಿದ್ಯಾರ್ಥಿ ನಿಲಯಕ್ಕೆ ಮಹಾರಾಜರು ನಿವೇಶನ ನೀಡಿದ್ದೂ ಉಂಟು. ಆಗಿನ ಕಾಲದಲ್ಲಿ ಈಗಿನಂತೆ ಮಠಗಳು ಮತ್ತು ಖಾಸಗಿ ಸಂಸ್ಥೆಗಳು ಶಾಲಾ ಕಾಲೇಜುಗಳನ್ನು ನಡೆಸುತ್ತಿರಲಿಲ್ಲ; ಬದಲಾಗಿ ಜಿಲ್ಲಾಕೇಂದ್ರಗಳಲ್ಲಿ ವಿದ್ಯಾರ್ಥಿ ನಿಲಯಗಳನ್ನು ನಡೆಸುತ್ತಿದ್ದರು.

ಬಡಮಕ್ಕಳ ವಿದ್ಯಾಭ್ಯಾಸಕ್ಕೆ ನೆರವಾದವರ ಹೃದಯಶ್ರೀಮಂತಿಕೆ ಈ ತೆರನಾದರೆ ಧರ್ಮಬುದ್ಧಿಯಿಂದ ಮಾಡಿದ ಅವರ ಪುಣ್ಯಕಾರ್ಯವನ್ನು ಗೌರವದಿಂದ ನೆನೆಸುವ ಬದಲು ಗೇಲಿಮಾಡುವ ಸಾರ್ವಜನಿಕರ ನಾಲಿಗೆಯ ನಂಜು ಮತ್ತೊಂದು ತೆರನಾಗಿದೆ. “ಬಿಟ್ಟಿ ಕೂಳು ಹಾಕಲು ಇದೇನು ತೋಟದಪ್ಪನ ಛತ್ರವೇ?” ಎಂಬ ಮಾತಿನ ಹಿಂದಿರುವ ಮನೋಧರ್ಮ ತುಂಬಾ ಕೀಳು ಅಭಿರುಚಿಯಿಂದ ಕೂಡಿದೆ. ತೋಟದಪ್ಪನವರು ಬಡಮಕ್ಕಳಿಗೆ ಮಾಡುತ್ತಿದ್ದ ಅನ್ನದಾನದ ಹಿಂದೆ ಮಾನವೀಯ ಮಿಡಿತವಿದೆ. ಅದನ್ನು ‘ಬಿಟ್ಟಿ ಕೂಳು’ ಎಂದು ಬಣ್ಣಿಸುವುದು ಮಾನವೀಯ ಭಾವನೆ ಇಲ್ಲದೆ ವ್ಯಾವಹಾರಿಕ ನೆಲೆಯಲ್ಲಿ ಯೋಚಿಸುವವರ ಮಾತಿನ ವೈಖರಿ. ಇಲ್ಲಿ ಬಡವನ ನಿಂದನೆಯಷ್ಟೇ ಅಲ್ಲ; ಅಂಥವರ ಬಗ್ಗೆ ಕಾಳಜಿ ಇಟ್ಟುಕೊಂಡು ದಾನಧರ್ಮ ಮಾಡಿದವರನ್ನೂ ಪರೋಕ್ಷವಾಗಿ ಅವಹೇಳನ ಮಾಡಿದಂತಾಗುತ್ತದೆಯೆಂಬುದನ್ನು ಮನಗಾಣಬೇಕು. ಹಸಿದು ಬಂದವರಿಗೆ ದಾಸೋಹಂಭಾವನೆಯಿಂದ ಅನ್ನ ನೀಡುವ ದಾನಿಗಳು ವಂದನಾರ್ಹರೇ ಹೊರತು, ನಿಂದನಾರ್ಹರಲ್ಲ. ಬೇಡುವ ವ್ಯಕ್ತಿಯ ಮೇಲಿನ ಅಸಹನೆಯಿಂದ ಒಂದು ಒಳ್ಳೆಯ ಕಾರ್ಯವನ್ನು ತಿರುಚಿ ನಿಂದನೆಗಾಗಿ ದುರ್ಬಳಕೆ ಮಾಡಿಕೊಳ್ಳುವುದು ತರವಲ್ಲ. ದೈನಂದಿನ ಜೀವನದಲ್ಲಿ ಈ ತರಹದ ಕೊಂಕು ಮಾತುಗಳನ್ನಾಡುವುದು ಜನರ ಕೆಟ್ಟ ಸ್ವಭಾವವಾಗಿದೆ. ‘ಬಳೆ ತೊಟ್ಟ ಹೆಂಗಸಾ ನೀನು?’ ಎಂದು ಛೇಡಿಸುವುದು ಇದಕ್ಕೆ ಇನ್ನೊಂದು ಉದಾಹರಣೆ. ಇದು ಮೇಲುನೋಟಕ್ಕೆ ಒಬ್ಬ ವ್ಯಕ್ತಿಯನ್ನು ಹಂಗಿಸಿದಂತೆ ಕಂಡುಬಂದರೂ ಈ ಮಾತಿನಿಂದ ಮಹಿಳೆಯರಲ್ಲಿ ಸಹಜವಾಗಿರುವ ಲಜ್ಜೆ, ಮಾರ್ದವತೆಗಳನ್ನು ಮತ್ತು ನಮ್ಮ ಸಂಸ್ಕೃತಿಯನ್ನು ಹಂಗಿಸಿ ಮಾತಾಡಿದಂತಾಗುತ್ತದೆ. ನಾಡಿನ ಇತಿಹಾಸದಲ್ಲಿ ಆಗಿ ಹೋದ ವೀರ ವನಿತೆಯರನ್ನು ಅಗೌರವಿಸಿದಂತಾಗುತ್ತದೆ. ಬಸವಣ್ಣನವರು ಬೋಧಿಸಿದ ಸಪ್ತಶೀಲಗಳಲ್ಲಿ “ಇದಿರ ಹಳಿಯಲು ಬೇಡ” ಎಂಬುದೂ ಒಂದು. ಇನ್ನೊಬ್ಬರನ್ನು ಹಂಗಿಸುವುದು ಕೆಲವರಿಗೆ ತಮಾಷೆಯಾಗಿ ಕಾಣಿಸಬಹುದು. ಆದರೆ ಅದರಿಂದ ಆ ವ್ಯಕ್ತಿಗಾಗುವ ಮಾನಸಿಕ ನೋವು ಅಪ್ಪಿಷ್ಟಲ್ಲ. ದೇವರ ದಾಸಿಮಯ್ಯನವರ ಈ ಮುಂದಿನ ವಚನದ ಆಶಯವನ್ನು ಗಮನಿಸಿ:

**ಹೊಲೆಯರ ಬಾವಿಯೊಳೊಂದು ಎಲುಬು ನಟ್ಟಿದ್ದರೆ**
**ಹೊಲೆ ಹೊಲೆ ಎಂಬುದೀ ಲೋಕವೆಲ್ಲ**
**ಹಲವೆಲುವಿರುವ ಈ ಬಾಯಲ್ಲಿ ಅಲ್ಲದುದ ನುಡಿದರೆ**
**ಹೊಲೆಯರ ಬಾವಿಗಿಂತ ಕರಕಷ್ಟ ಕಾಣಾ ರಾಮನಾಥ!**

ಹರಿಜನರ ಕೇರಿಯಲ್ಲಿರುವ ಬಾವಿಯಲ್ಲಿ ಸತ್ತ ಪ್ರಾಣಿಗಳ ಮೂಳೆ ಬಿದ್ದಿದ್ದರೆ ಅಸಹ್ಯಪಟ್ಟುಕೊಂಡು ಹೀಗಳೆಯುತ್ತಾರೆ. ಆದರೆ ಹಾಗೆ ಹೀಗಳೆಯುವ ಮುನ್ನ ತಮ್ಮ ಬಾಯಲ್ಲಿ ಒಂದಲ್ಲ ಅನೇಕ ಮೂಳೆ/ಹಲ್ಲುಗಳು ಇವೆಯೆಂಬುದನ್ನು ನಿಂದಿಸುವವರು ಮರೆಯಬಾರದು. ಹಲವು ಮೂಳೆಗಳಿರುವ ಈ ಬಾಯಿಂದ ಕೆಟ್ಟ ಮಾತುಗಳನ್ನಾಡಿದರೆ ಅದು ಸತ್ತ ಪ್ರಾಣಿಗಳ ಮೂಳೆಯಿರುವ ಬಾವಿಗಿಂತಲೂ ಕನಿಷ್ಠ ಎಂಬುದನ್ನು ಮನಗಾಣಬೇಕು!

**26.4.2012**

**ಶ್ರೀ ತರಳಬಾಳು ಜಗದ್ಗುರು**
**ಡಾ|| ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು**
**ಸಿರಿಗೆರೆ**